(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ವಿರೋಧ ಪಕ್ಷದ ಸದಸ್ಯರು ಸನದನ ಬಾವಿಯಲ್ಲಿ ಧರಣಿನಿರತರಾಗಿದ್ದರು)

ಉಪಾಧ್ಯಕ್ಷರು:– ಹೇಳಿ, ಮಂಜು.

ಶ್ರೀ ಎ. ಮಂಜು:– ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕ ಮಿತ್ರರೆಲ್ಲರೂ ಕೆ.ಆರ್.ನಗರ ತಾಲ್ಲೂಕಿನಲ್ಲಿ ಆಗಿರುವ ಅನ್ಯಾಯದ ಪ್ರಶ್ನೆ ಬಗ್ಗೆ ಅಧಿಕಾರಿಯನ್ನು suspend ಮಾಡಬೇಕೆಂದು ಬಾವಿಯಲ್ಲಿ ಬಂದಿದ್ದಾರೆ. ಬಹುಶಃ ಈ ರೀತಿ ಮಾಡಿರುವುದು ಒಳ್ಳೆಯ ಸಂಪ್ರದಾಯ, ನೀವು ಮಾಡಿಸಬೇಕು ನಿಜ. ಆದರೆ, ನೀವೆಲ್ಲಾ ಇದ್ದೀರಿ, ಬೇರೆ ಕ್ಷೇತ್ರದಲ್ಲಿ ಮಾಡಿದಾಗಲೂ ಆ ರೀತಿ ಬಾವಿಯಲ್ಲಿ ಬರುವುದನ್ನು ಇಟ್ಟುಕೊಳ್ಳಬೇಕು. ನಾವು ಉದಾಹರಣೆಗೆ ಹೇಳುತ್ತೇವೆ, ದತ್ತಾರವರು ತಿಳಿದುಕೊಳ್ಳಬೇಕು, ಕೆ.ಎಂ.ಎಫ್. ನಮ್ಮ ಹಾಸನ ಡೈರಿ ಅಧ್ಯಕ್ಷರು ನಮ್ಮ ಶ್ರೀಮಾನ್ ರೇವಣ್ಣನವರು ನನ್ನ ಕ್ಷೇತ್ರದಲ್ಲಿ 10 ಡೈರಿಗಳನ್ನು open ಮಾಡಿದ್ದಾರೆ.

(ಗೊಂದಲ)

ಶ್ರೀ ಎ. ಮಂಜು:– ಸ್ವಾಮಿ, ನಮಗೆ ಹೇಳಲು ಅವಕಾಶ ಕೊಡಿ, ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ಅತಿ ಹೆಚ್ಚಿನ ಅನ್ಯಾಯ ಮಾಡಿರುವುದು ನಾವಲ್ಲ, ನೀವು. ಇದು ಆಗಬಾರದು, ಆಗಬೇಕೆಂದು ನಾನು ಹೇಳುವುದಿಲ್ಲ. ನೀವು ಮಾಡುತ್ತಿರುವುದು ಬಹಳ ಒಳ್ಳೆಯ ಸಂಪ್ರದಾಯ. ಪಾಪ ರೇವಣ್ಣನವರು ಇಲ್ಲಿಯೇ ಇದ್ದಾರೆ. ನನ್ನ ಸ್ವಂತ ಊರಿನಲ್ಲಿ ಡೈರಿಯನ್ನು ಉದ್ಘಾಟನೆ ಮಾಡಿಸುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಯಾವತ್ತೂ ಶಾಸಕರನ್ನು ಬಿಟ್ಟು ಯಾವುದೇ ಕಾರ್ಯಕ್ರಮಕ್ಕೂ ಹೋಗಿಲ್ಲ. ಆದುದರಿಂದ ದಯಮಾಡಿ, ಯಾರೋ print ಮಾಡಿಕೊಂಡರೆ ನಾನೇನು ಮಾಡುವುದಕ್ಕಾಗುತ್ತದೆ?